ಓ ಎಸ್ **56/2022** ಡಿ. ಡಬ್ಲ್ಯೂ **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **25.03.2026**

ಪಾಟೀ ಸವಾಲು ಃ ಶ್ರೀ **TKRG** ನ್ಯಾಯಾವಾದಿಗಳಿಂದಃ

ನನ್ನ ತಂದೆಯ ತಂದೆ ಹೆಸರು ಆರ್ ರಾಮಯ್ಯ. ನನ್ನ ತಾತನಿಗೆ ಒಟ್ಟು 5 ಜನ ಮಕ್ಕಳು, ಅವರುಗಳೆಂದರೆ ಆರ್.ವಿಜಯ್ ಕುಮಾರ್, ಆರ್.ಸುರೇಂದ್ರ ಕುಮಾರ್, ಕಮಲಮ್ಮ, ಕಾಂತಮ್ಮ ಮತ್ತು ಇನ್ನೊಬ್ಬರು ಮರಣ ಹೊಂದಿದ್ದು, ಅವರ ಹೆಸರು ನನಗೆ ನೆನಪಿಲ್ಲ.

2. ನಾನು ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲೇ ವಾಸ ಇದ್ದೇವೆ ಎಂದರೆ ಸಾಕ್ಷಿಯು 1999 ರವರೆಗೆ ನಾವು ಒಟ್ಟು ಕುಟುಂಬದಲ್ಲಿ ಇದ್ದೇವು ಎಂದು ನುಡಿಯುತ್ತಾರೆ. 1999 ರಿಂದ ನಾವು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಇದ್ದೇವೆ. ಕೆಲಸದ ವಿಚಾರವಾಗಿ ನಾವು ಬೇರೆ ಬೇರೆ ಕಡೆ ಪ್ರತ್ಯೇಕವಾಗಿ ವಾಸ ಇದ್ದೇವೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಆಸ್ತಿಗಳು ವಿಭಾಗ ಆಗಿರುವುದಿಲ್ಲ ಎಂದರೆ ಸರಿ.

3. ನನ್ನ ತಂದೆಯ ಸಹೋದರಿಯರು ಅಂದರೆ 4 ಮತ್ತು 5 ನೇ ಪ್ರತಿವಾದಿಗಳು ಮದುವೆಮಾಡಿಕೊಂಡು ಅವರ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನ್ನ ತಾತನ ಮರಣ ನಂತರ ನನ್ನ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿ ಮುಂದುವರೆಯುತ್ತಾ ಬಂದಿರುತ್ತಾರೆ ಎಂದರೆ ಸರಿ.

4. ನನ್ನ ತಾತನ ಮರಣ ನಂತರ ನನ್ನ ತಂದೆ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಜ್ಜಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

5. ನನ್ನ ಅಜ್ಜಿ ಮತ್ತು ನನ್ನ ತಂದೆಯ ಮರಣ ನಂತರ ನಮ್ಮ ಕುಟುಂಬ ಮತ್ತು ವಾದಿಯ ಕುಟುಂಬದ ನಡುವೆ ಅಷ್ಟೊಂದು ಅನ್ಯೋನ್ಯತೆ ಇರಲಿಲ್ಲ ಎಂದರೆ ಸರಿ.

6. ನನ್ನ ತಾತನ ಮರಣ ನಂತರ ಕುಟುಂಬದ ಆಸ್ತಿಗಳ ಖಾತೆಯು ನನ್ನ ಅಜ್ಜಿ ಗಂಗಮ್ಮ, ನನ್ನ ತಂದೆ ಆರ್.ವಿಜಯ್ ಕುಮಾರ್ ಮತ್ತು ವಾದಿಯ ಹೆಸರಿಗೆ ಜಂಟಿ ಬಂದಿರುತ್ತವೆ ಎಂದರೆ ಸರಿ. ಈ ಮೇಲೆ ಹೇಳಿದಂತೆ ನಮ್ಮ ನಡುವೆ ಅನ್ಯೋನ್ಯತೆ ಇರದಿದ್ದ ಕಾರಣ ವಾದಿಯು ಬಂದು ನಮ್ಮನ್ನು ದಾವಾ ಆಸ್ತಿಗಳಲ್ಲಿ ಭಾಗವನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ.

7. ನಾವು ಭಾಗವನ್ನು ಕೊಡಲು ನಿರಾಕರಿಸಿದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸುವ ಮುಂಚೆ ಆಸ್ತಿಗಳಲ್ಲಿ ಭಾಗವನ್ನು ಕೋರಿ ತಮ್ಮ ವಕೀಲರ ಮುಖಾಂತರ ನನ್ನ ತಾಯಿಗೆ ನೋಟಿಸ್ ಅನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದಾಗ್ಯೂ ನಾವು ವಾದಿಗೆ ಆಸ್ತಿಗಳಲ್ಲಿ ಭಾಗವನ್ನು ಕೊಡದಿದ್ದ ಕಾರಣ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಈಗಲೂ ಸಹ ದಾವಾ ಆಸ್ತಿಗಳ ಖಾತೆಯು ಜಂಟಿಯಾಗಿ ಮುಂದುವರೆಯುತ್ತಿದೆ ಎಂದರೆ ಸರಿ.ದಾವಾ ಆಸ್ತಿಗಳ ಮೇಲೆ ವಾದಿಗೆ ಸಮಭಾಗದ ಹಕ್ಕು ಇದೆ ಎಂದರೆ ಸರಿ. ದಾವಾ ಆಸ್ತಿಗಳು ಅಲ್ಲದೇ ನಮ್ಮ ಕುಟುಂಬದಲ್ಲಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಆಸ್ತಿಗಳು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

9. ವಾದಿಗೆ ಅನಾವಶ್ಯಕವಾಗಿ ತೊಂದರೆ ಕೊಡುವ ಸಲುವಾಗಿ ದಾವಾ ಆಸ್ತಿಗಳ ಖಾತೆಯು ಜಂಟಿ ಇರುವುದನ್ನು ದುರುಪಯೋಗಪಡಿಸಿಕೊಂಡು ದಾವಾ ಆಸ್ತಿಗಳಲ್ಲಿ ಭಾಗವನ್ನು ಕೊಡದೇ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ